ಸೋಮವಾರಪೇಟೆ ತಾಲ್ಲೂಕಿನ ಶನಿವಾರ ಸಂತೆಯಲ್ಲಿ 66 ಕೆ.ವಿ. ಪವರ್ ಸ್ಟೇಷನ್.

2982(3514)

ಶ್ರೀ ಅಪ್ಪಚ್ಚುರಂಜನ್ ಎಂ.ಪಿ.(ಸೋಮವಾರಪೇಟೆ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಸೋಮವಾರ ಪೇಟೆ ತಾಲ್ಲೂಕಿನ ಶನಿವಾರ ಸಂತೆಯಲ್ಲಿ 66 ಕೆ.ವಿ. ಪವರ್ ಸ್ಟೇಷನ್ ನಿರ್ಮಿಸುವುದಾಗಿ ಕಳೆದ ವಿಧಾನ ಸಭೆಯಲ್ಲಿ ಉತ್ತರ ಕೊಟ್ಟಿದ್ದರೂ ಸಹ ಇದುವರೆವಿಗೆ ಕಾರ್ಯಾರಂಭವಾಗದಿರಲು ಕಾರಣವೇನು? ಇದು ಯಾವ ಹಂತದಲ್ಲಿದೆ? ವಿವರ ಕೊಡುವುದು?

ಶ್ರೀ ವೀರಕುಮಾರ್ ಅ.ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ. ಈ ವಿದ್ಯುತ್ ಉಪ-ಕೇಂದ್ರದ ಸ್ಥಾಪನೆಗೆ ಬೇಕಾಗುವ ಜಮೀನು ಅರಣ್ಯ ಇಲಾಖೆಯಿಂದ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವಶಕ್ಕೆ ಬಂದಿರುವುದಿಲ್ಲ. ಅರಣ್ಯ ಇಲಾಖೆಯಿಂದ ತನ್ನ ವಶಕ್ಕೆ ಭೂಮಿಯನ್ನು ಪಡೆಯಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಅಗತ್ಯವಿರುವ ಕ್ರಮಗಳನ್ನು ಜರುಗಿಸುತ್ತಿದೆ. ಭೂಮಿಯನ್ನು ವಶಕ್ಕೆ ಪಡೆದುಕೊಂಡ ನಂತರ ನಿರ್ಮಾಣ ಕಾರ್ಯವನ್ನು ಕೈಗೊಳ್ಳುವ ಬಗ್ಗೆ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಚಕ್ರಾ ವರಾಹಿ ಭೂ ಸಂತ್ರಸ್ಥ ಕುಟುಂಬದ ಒಬ್ಬರಿಗೆ ಉದ್ಯೋಗ.

2983(3488)

ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಕ್ರಾ-ವರಾಹಿ ಸಂತ್ರಸ್ಥ ಕುಟುಂಬದ ತಲಾ ಒಬ್ಬರಿಗೆ ಉದ್ಯೋಗ ಕೊಡುವ ನಿಯಮದಂತೆ ಇದುವರೆಗೆ ಈ ಸೌಲಭ್ಯ ಪಡೆದ ಕುಟುಂಬಗಳ ಸಂಖ್ಯೆ ಎಷ್ಟು?

ಆ) ಇದುವರೆವಿಗೂ ಉದ್ಯೋಗ ಸಿಗದಿರುವ ಕುಟುಂಬಗಳ ನಿರುದ್ಯೋಗಿಗಳು ಈ ಬಗ್ಗೆ ಪ್ರತಿಭಟನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಇದರ ಬೇಡಿಕೆಗಳೇನು?

ಇ) ಈ ಬೇಡಿಕೆ ಈಡೇರಿಕೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದ?

ಶ್ರೀ ವೀರಕುಮಾರ್ ಆ.ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ಇದುವರೆಗೂ 261 ಮಂದಿ ಚಕ್ರಾ-ವರಾಹಿ ಭೂ ಸಂತ್ರಸ್ಥರಿಗೆ ಉದ್ಯೋಗ ನೀಡಲಾಗಿದೆ. ಇದಲ್ಲದೆ 4 ಮಂದಿ ಭೂಸಂತ್ರಸ್ಥರನ್ನು 2001ರಲ್ಲಿ ಟ್ರೈನಿದಾರರಾಗಿ ನೇಮಿಸಲಾಗಿದೆ.

ಆ) ಚಕ್ರಾ, ವರಾಹಿ ಮತ್ತು ಸಾವೆಹಕ್ಲು ಭೂ ಸಂತ್ರಸ್ಥರನ್ನು ಪ್ರತಿನಿಧಿಸುವ ಮೂರು ಸಂಘಟನೆಗಳು ತಮ್ಮ ಸದಸ್ಯರೊಂದಿಗೆ ಮಾಸ್ತಿಕಟ್ಟೆಯಲ್ಲಿ ಫೆಬ್ರವರಿ 2001ರಲ್ಲಿ ಪ್ರತಿಭಟನೆ ಪ್ರಾರಂಭಿಸಿದ್ದವು. ಅವರ ಬೇಡಿಕೆಗಳು ಇಂತಿವೆ.

ಎ) ಎಲ್ಲಾ ಭೂಸಂತ್ರಸ್ಥ ಕುಟುಂಬಗಳಿಗೂ ಕನಿಷ್ಟ ಕುಟುಂಬದ ಸದಸ್ಯರೊಬ್ಬರಿಗೆ ಉದ್ಯೋಗ ನೀಡಬೇಕು.

ಬಿ) ಉದ್ಯೋಗವು ವಿದ್ಯಾರ್ಹತೆಗೆ ತಕ್ಕದ್ದಾಗಿರಬೇಕು ಮತ್ತು ನಿಗಧಿತ ಅವಧಿಯಲ್ಲಿ ನೀಡಬೇಕು.

ಸಿ) ಸರ್ಕಾರಿ ಮತ್ತು ಅರೆ ಸರ್ಕಾರಿ ಇಲಾಖೆಗಳಲ್ಲಿ ಭೂಸಂತ್ರಸ್ಥರಿಗಾಗಿ ಉದ್ಯೋಗಕ್ಕೆ ಮೀಸಲಾತಿ ನೀಡಬೇಕು ಮತ್ತು ವಯೋಮಿತಿ ಸಡಿಲಿಕೆಯನ್ನು ಸಹ ಪರಿಗಣಿಸಬೇಕು.

ಡಿ) ಭೂಸಂತ್ರಸ್ಥರಿಗೆ ಸೌಲಭ್ಯ ಒದಗಿಸುವ ಬಗ್ಗೆ ನೀಡಿರುವ ಸರ್ಕಾರಿ ಆದೇಶವನ್ನು ಬದಲಾವಣೆ ಮಾಡುವ ಬಗ್ಗೆ ರೈತ ಪ್ರತಿನಿಧಿಗಳೊಂದಿಗೆ ಸರ್ಕಾರವು ಚರ್ಚಿಸಬೇಕು.

ಇ) ನಾಗರೀಕ ಸೌಲಭ್ಯಗಳಾದ ರಸ್ತೆ ಶಾಲೆಗಳು, ವಿದ್ಯುಚ್ಛಕ್ತಿ, ಶಿಕ್ಷಣ, ಅಂಚೆ ಸೇವೆ ಇತ್ಯಾದಿಗಳನ್ನು ಭೂಸಂತ್ರಸ್ಥರಿಗೆ ಒದಗಿಸುವುದು.

ಎಫ್) ಉನ್ನತಾಧಿಕಾರಿಗಳ ಪುನರ್ವಸತಿ ಸಮಿತಿಯಲ್ಲಿ ಚರ್ಚಿಸಿರುವಂತೆ, ಮನೆ ಕಳೆದುಕೊಂಡ 82 ಸಂತ್ರಸ್ಥರಿಗೆ ಪುನರ್ ಮೌಲ್ಯದ ಪ್ರಕಾರ ಪರಿಹಾರ ನೀಡುವುದು.

ಇ) ಸರ್ಕಾರವು ತನ್ನ ಮೊದಲಿನ ಆದೇಶ ಸಂಖ್ಯೆ: ಆರ್‌ಡಿ 48 ಎಒಎಸ್ 83 ದಿನಾಂಕ 23.8.83ರಲ್ಲಿ ಚಕ್ರಾವರಾಹಿ ಯೋಜನೆಗಳಲ್ಲಿ ಭೂಮಿ ಕಳೆದುಕೊಂಡವರಿಗೆ ಉದ್ಯೋಗ ನೀಡುವ ಬಗ್ಗೆ ಆದೇಶ ಹೊರಡಿಸಿತ್ತು. ಈ ಆದೇಶದ ಪ್ರಕಾರ ಕೌಶಲ್ಯತೆ

ಹೊಂದಿರುವ ಅಥವಾ ಇತರೆ ವ್ಯಕ್ತಿಗಳನ್ನು ನೇಮಕಾತಿ ಮಾಡಿಕೊಳ್ಳುವಾಗ ಒಂದು ಕುಟುಂಬದ ಒಬ್ಬ ವ್ಯಕ್ತಿಗೆ ಉದ್ಯೋಗಕ್ಕೆ ಆದ್ಯತೆ ಮೇಲೆ ಪರಿಗಣಿಸಬೇಕು. ಇತರೆ ಎಲ್ಲಾ ಅಂಶಗಳು ಸಮಾನವಾಗಿದ್ದು ಕಾರ್ಯಭಾರಕ್ಕೆ ಅನುಗುಣವಾಗಿಲ್ಲದ ಪಕ್ಷದಲ್ಲಿ ವಿಶೇಷ ಹೆಚ್ಚುವರಿ ಹುದ್ದೆಗಳನ್ನು ಸೃಜಿಸಕೂಡದೆಂದೂ ಆದೇಶಿಸಿರುತ್ತದೆ.

ಸರ್ಕಾರವು ತನ್ನ ಇನ್ನೊಂದು ಆದೇಶ ಸಂಖ್ಯೆ ಪಿಡಬ್ಲ್ಯುಡಿ ಸಂಖ್ಯೆ ಪಿಪಿಸಿ 85 ದಿನಾಂಕ 28.12.85ರಲ್ಲಿ ಯೋಜನೆಯನ್ನು ಕಾರ್ಯಗತಗೊಳಿಸುವ ಸಂದರ್ಭದಲ್ಲಿ ಭೂಮಿಯನ್ನು ವಶಪಡಿಸಿಕೊಂಡ ಸಂಸ್ಥೆಯು ತನ್ನ ಸಂಸ್ಥೆಯಲ್ಲಿ ಅಥವಾ ತನ್ನ ಗುತ್ತಿಗೆದಾರರ ಮುಖಾಂತರ ಸಂತ್ರಸ್ಥ ಕುಟುಂಬದ ಸದಸ್ಯರೊಬ್ಬರಿಗೆ ಉದ್ಯೋಗ ನೀಡಬೇಕೆಂದು ಆದೇಶಿಸಿದೆ.

ಇದಲ್ಲದೆ ಸರಕಾರವು ದಿನಾಂಕ 13.2.2001ರ ಆದೇಶದಲ್ಲಿ ಗ್ರೂಪ್ 'ಸಿ' ಮತ್ತು 'ಡಿ' ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಶೇಕಡ 5 ರಷ್ಟು ರಿಕ್ತ ಸ್ಥಾನಗಳನ್ನು ಯೋಜನೆಗಳಿಂದ ನಿರಾಶ್ರಿತರಾದ ಕುಟುಂಬಗಳ ಅಭ್ಯರ್ಥಿಗಳಿಂದ ಭರ್ತಿ ಮಾಡಲು ಆಸ್ಪದ ಕಲ್ಪಿಸಿದೆ.

ಮಾನ್ಯ ಸಮಾಜ ಕಲ್ಯಾಣ ಮತ್ತು ಶಿವಮೊಗ್ಗ ಜಿಲ್ಲೆಯ ಉಸ್ತುವಾರಿ ಸಚಿವರ ಆದ್ಯತೆಯಲ್ಲಿ ದಿನಾಂಕ:24.7.2001ರಂದು ಜರುಗಿದ ಉನ್ನತಾಧಿಕಾರಿ ಪುನರ್ವಸತಿ ಸಮಿತಿಯ ಸಭೆಯಲ್ಲಿ ಭೂಸಂತ್ರಸ್ಥರ ಸಂಘಟನೆಗಳು ಎತ್ತಿದ ಎಲ್ಲಾ ವಿಷಯಗಳನ್ನು ಚರ್ಚಿಸಲಾಗಿದೆ. ಸಮಿತಿಯ ಶಿಫಾರಸ್ಸುಗಳನ್ನು ದಿನಾಂಕ 9.2.2001ರಂದು ನಡೆದ ನಿಗಮದ ನಿರ್ದೇಶಕರ ಮಂಡಳಿಯ 184ನೇ ಸಭೆಯ ಮುಂದಿರಿಸಲಾಗಿತ್ತು. ನಿರ್ದೇಶಕ ಮಂಡಳಿಯು ಎಲ್ಲಾ ಭೂಸಂತ್ರಸ್ಥರಿಗೂ ಉದ್ಯೋಗವನ್ನು ಒದಗಿಸಬೇಕೆಂಬ ಮತ್ತು ಉದ್ಯೋಗವನ್ನು ಒದಗಿಸಲು ಸಾಧ್ಯವಾಗದಿದ್ದ ಪಕ್ಷದಲ್ಲಿ ಸೂಕ್ತ ಬದಲಿ ಸಹಾಯವನ್ನು ನೀಡಬೇಕೆಂಬ ಪ್ರಸ್ತಾವನೆಯನ್ನು ಈ ಕೆಳಗಿನ ಕಾರಣಗಳಿಂದ ಪರಿಗಣಿಸಲು ಸಾಧ್ಯವಾಗದೆಂದು ಪರಿಗಣಿಸಿತು.

1. ಸರ್ಕಾರವು ಈಗಾಗಲೇ ಯೋಜನೆಗಳಿಂದ ನಿರಾಶ್ರಿತಗೊಂಡವರಿಗ ಉದ್ಯೋಗದಲ್ಲಿ ಪ್ರತಿಶತ 5ರಷ್ಟು ಹುದ್ದೆಗಳನ್ನು ಮೀಸಲಿರಿಸಿದೆ.

2. ನಿಗಮದ ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಈ ಪ್ರಸ್ತಾವನೆಯನ್ನು ಅಂಗೀಕರಿಸಲು ಸಾಧ್ಯವಿರುವುದಿಲ್ಲ.

3. ನಿಗಮದಲ್ಲಿ ಖಾಲಿ ಹುದ್ದೆಗಳು ಲಭ್ಯವಿರದೇ ಇರುವುದರಿಂದ ಎಲ್ಲಾ ಭೂಸಂತ್ರಸ್ಥರನ್ನು ನೇಮಕ ಮಾಡಿಕೊಳ್ಳಲು ಸಾಧ್ಯವಿರುವುದಿಲ್ಲ.